ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಕ್ಯಾಸ್ಟ್ ಸರ್ಟಿಫಿಕೇಟನ್ನು ಕೊಡಬೇಕೆಂದು ನಾನು ಈಗಾಗಲೇ ಭರವಸೆ ಕೊಡುವುದಕ್ಕೆ ಆಗುವುದಿಲ್ಲ. ಏಕೆಂದರೆ ಅವರು ಮನವಿಯನ್ನು ಸಲ್ಲಿಸಿ ನಮ್ಮನ್ನು ಹಿಂದುಳಿದ ವರ್ಗಕ್ಕೆ ಸೇರಿಸಬೇಕೆಂದು, ಹಿಂದುಳಿದ ಆಯೋಗ ರಚನೆಯಾಗಿದೆ. ಹಿಂದುಳಿದ ಆಯೋಗ ರಚನೆಯಾದ ಮೇಲೆ ಏನಾದರೂ ಕ್ರಮ ತೆಗೆದುಕೊಳ್ಳಬೇಕಾದರೆ ಹಿಂದುಳಿದ ಆಯೋಗದವರೇ ಆ ಕ್ರಮ ಕೈಗೊಳ್ಳಬೇಕು.

ಅಧ್ಯಕ್ಷರು: ನಿಮ್ಮ ನಾರ್ಮ್ಸ್ ಏನು ಇರುತ್ತೆ. ಆ ನಾರ್ಮ್ಸ್‌ಗೆ ಒಳಪಡುತ್ತಾರೊ ಇಲ್ಲವೋ ಎಂದು ನಿಮ್ಮ ಡಿ.ಸಿ.ಯವರಿಗೆ ಕಳುಹಿಸಿ. ಇಮ್ಮಿಡಿಯೇಟ್ ಆಗಿ ಒಂದು ರಿಪೋರ್ಟ್ ತರಿಸಿಕೊಂಡು ಟೆಂಪೊರರಿ ರಿಲೀಫ್ ಕೊಡಿ. ನೀವು ಪರ್ಮನೆಂಟ್ ಆಗಿ ಅವರನ್ನು ತರತಕ್ಕಂಥದ್ದು ನಿಧಾನಕ್ಕೆ ಮಾಡಿ. ಟೆಂಪೊರರಿ ರಿಲೀಫ್ ಕೊಡಿ. ಅಕಾಡೆಮಿಕ್ ಎಜುಕೇಷನ್‌ಗೆಲ್ಲಾ ತೊಂದರೆಯಾಗುತ್ತೆ.

ಶ್ರೀ ಎಂ.ವೀರಪ್ಪಮೊಯಿಲಿ: ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಕೂಡ ಇದೆ. ಅವರಲ್ಲೇ ಅದನ್ನು ಮಾಡಬಹುದು. ಮಾಡಬಾರದೆಂದು ಹೇಳಿ ಏನು ಇಲ್ಲ.

SRI M.C.NANAIAH: unless they come under the purview of the backward lists ಅವರು ಮುಖ್ಯ ಮಂತ್ರಿಯಾಗಿದ್ದರು, ಈಗ ಯೋಚನೆ ಮಾಡೋಣ.

ಶ್ರೀ ಎಂ.ವೀರಪ್ಪಮೊಯಿಲಿ: ಇಂಥದ್ದೇ ಕೇಸ್ ಬಂದಾಗ it was immediately settled. ಆದರೆ ಇದು ಹಾಗೆಯೇ ಉಳಿದುಕೊಂಡಿತು. ಮಾಡುವುದಕ್ಕೆ ಸಾಧ್ಯ ಇದೆ.

ಶ್ರೀ ಎಂ.ಸಿ.ನಾಣಯ್ಯ: ಬ್ಯಾಕ್‌ವರ್ಡ್ ಕಮಿಷನ್ ಅಧ್ಯಕ್ಷರ ಜೊತೆಯಲ್ಲಿ ನಾನು ಮಾತನಾಡುತ್ತೇನೆ.

ಶ್ರೀ ಎಂ.ವೀರಪ್ಪಮೊಯಿಲಿ: I will also speak to him.

ಎ) ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆಯಲ್ಲಿ ನಡೆದಿರಬಹುದಾದ ಅವ್ಯವಹಾರದ ಬಗ್ಗೆ ಸಿ.ಓ.ಡಿ ತನಿಖೆ ನಡೆಸುವುದು.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ): ಮಾನ್ಯ ಅಧ್ಯಕ್ಷರೇ, ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆಯನ್ನು ವಿಸ್ತರಣೆ ಯೋಜನೆಗೆ ಕೈಗೆ ತೆಗೆದುಕೊಂಡು

ಸುಮಾರು ಎರಡು ವರ್ಷಗಳಿಂದ ಕೇಂದ್ರಸರ್ಕಾರ ಮತ್ತು ರಾಜ್ಯ ಸರ್ಕಾರ ಮತ್ತು ರೈತರು ಸೇರಿ ಸುಮಾರು 60 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆವು. ಆದರೆ ವಿಸ್ತರಣಾ ಯೋಜನೆ ಕಾರ್ಯಕ್ರಮ ಸರಿಯಾಗಿ ಇಲ್ಲದೇ ಇರುವುದರಿಂದ ಈ ವರ್ಷ ಸುಮಾರು 13 ಕೋಟಿ ರೂಪಾಯಿ ನಷ್ಟವಾಗಿದೆ. ಮತ್ತು ಆ ವಿಸ್ತರಣಾ ಯೋಜನೆ ಕೇವಲ ನೋಡಲಿಕ್ಕೆ ಮಾತ್ರ ಸಹಕಾರಿ ಕ್ಷೇತ್ರವಾಗಿದೆ. ಆದರೆ ಪೂರ್ಣ ಶುಗರ್ ಸ್ಪೆಟ್ ಲೆವಲ್ ಅಡ್ವೈಸರಿ ಕಮಿಟಿ ಎಂದು ಮಾಡಿ ಸಕ್ಕರೆ ನಿರ್ದೇಶಕರ ನೇತೃತ್ವದಲ್ಲಿ ಪೂರ್ಣ ಒಂದು ಸಹಕಾರಿ ಸಂಸ್ಥೆಗೆ ವಿಸ್ತರಣಾ ಯೋಜನೆಯನ್ನು ಕೊಟ್ಟು ಟರ್ನ್‌ಕೀ ಬೇಸಿಸ್ ಆಧಾರದ ಮೇಲೆ ಸರ್ಕಾರ ದುಡ್ಡುಕೊಡುವುದು.ಕೆಲವು ವಿಷಯಗಳಲ್ಲಿ ವಿಳಂಬವಾಗಿ ಕಾರ್ಯ ಕ್ರಮ ಕ್ರಮಬದ್ಧವಾಗಿ ಆಗದೇ ಇರುವುದರಿಂದ ಅಲ್ಲಿ ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆ ಸರ್ವ ಸದಸ್ಯರ ಸಭೆಯಲ್ಲೂ ಒಂದು ರೆಸಲ್ಯೂಷನನ್ನು ಮಾಡಿದ್ದಾರೆ. ಈ ಪೂರ್ಣ ವಿಸ್ತರಣಾ ಯೋಜನೆಯಲ್ಲಿ ನಡೆದಿರತಕ್ಕಂಥ ಅನ್ಯಾಯಗಳನ್ನು ಸಿಓಡಿ ತನಿಖೆಗೆ ಒಳಪಡಿಸಿ ಯಾರ್ಯಾರು ತಪ್ಪಿತಸ್ಥರು ಇದ್ದಾರೆ ಅವರಿಗೆ ಶಿಕ್ಷೆ ಆಗಬೇಕು ಎನ್ನುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆ. ಆದ್ದರಿಂದ, ತಮ್ಮ ಮೂಲಕ ಸಕ್ಕರೆ ಮಂತ್ರಿಗಳನ್ನು ಕೇಳುತ್ತೇನೆ. ಅವರು ಈ ವಿಷಯದಲ್ಲಿ ಬಹಳ ವಿಚಾರಗಳನ್ನು ತಿಳಿದುಕೊಂಡಿದ್ದಾರೆ. ಈಗಾಗಲೇ ಅಧ್ಯಕ್ಷರಾಗಿಯೂ ಕೆಲಸ ಮಾಡಿದ್ದಾರೆ. ದಯವಿಟ್ಟು ಇದನ್ನು ಸಿಓಡಿ ತನಿಖೆಗೆ ಒತ್ತಾಯ ಮಾಡಬೇಕು ಎಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಎಚ್.ಶಿವಪ್ಪ (ಸಕ್ಕರೆ ರಾಜ್ಯ ಸಚಿವರು): ಅಧ್ಯಕ್ಷರೇ ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆ (ನಿ), ಇದು ತನ್ನ ಕಬ್ಬು ನುರಿಸುವ ಸಾಮರ್ಥ್ಯವನ್ನು 1500 ಟಿಸಿಡಿ ಯಿಂದ 3500 ಟಿಸಿಡಿಗೆ ವಿಸ್ತರಿಸಿಕೊಳ್ಳಲು ಕೇಂದ್ರ ಸರ್ಕಾರದಿಂದ ದಿನಾಂಕ: 9-12-88 ರಲ್ಲಿ ಲೆಟರ್ ಆಫ್ ಇಂಟೆಂಟ್ ಪಡೆದು ಕಾರ್ಖಾನೆಯ ಆಧುನೀಕರಣ ಮತ್ತು ವಿಸ್ತರಣಾ ಕಾರ್ಯವನ್ನು ಹಮ್ಮಿಕೊಂಡು ನಂತರ 3500 ಟಿಸಿಡಿ ಸಾಮರ್ಥ್ಯದ ಯಂತ್ರೋಪಕರಣಗಳನ್ನು ಅಳವಡಿಸಿಕೊಂಡು ಅಂತಿಮವಾಗಿ ದಿನಾಂಕ: 14-6-98 ರಂದು ಪ್ರಾಯೋಗಿಕವಾಗಿ ಕಬ್ಬು ನುರಿಸುವ ಕೆಲಸ ಪ್ರಾರಂಭಿಸಿರುತ್ತದೆ. ಕಾರ್ಖಾನೆಯ ಆಧುನೀಕರಣ ಮತ್ತು ವಿಸ್ತರಣಾ ಕಾರ್ಯದಲ್ಲಿ ಅನಗತ್ಯ ವಿಳಂಬ ಹಾಗೂ ಯೋಜನಾ ವೆಚ್ಚದಲ್ಲಿ ಗಣನೀಯ ಏರಿಕೆ ಮಾಡಿದ್ದು ಅನೇಕ ಅವ್ಯವಹಾರಗಳು ನಡೆದಿರುವ ಬಗ್ಗೆ ಕಾರ್ಖಾನೆಯ ಆಡಳಿತ ಮಂಡಳಿಯ ಮೇಲೆ ಗುರುತರವಾದ ಆಪಾದನೆಗಳಿರುತ್ತದೆ. ಆಧುನೀಕರಣ ಮತ್ತು ವಿಸ್ತರಣಾ ಯೋಜನೆಯ ಕಾರ್ಯ ಒಂದು ವರ್ಷ ವಿಳಂಬವಾದರೂ ಯೋಜನೆಯು ತೃಪ್ತಿಕರವಾಗಿ ಪೂರ್ಣಗೊಂಡಿಲ್ಲ. ಯೋಜನೆಗೆ ನಿಗದಿ ಮಾಡಿದ ವೆಚ್ಚಕ್ಕಿಂತ ಅಧಿಕ ಹಣ ವೆಚ್ಚವಾಗಿದ್ದು ಕಾರ್ಖಾನೆಗೆ ಹೆಚ್ಚಿನ ನಷ್ಟ ಉಂಟಾಗಿರುತ್ತದೆ. ಕಾರ್ಖಾನೆಯ ಆಧುನೀಕರಣ ಮತ್ತು ವಿಸ್ತರಣಾ ಯೋಜನೆಯಲ್ಲಿ ಅನೇಕ ಅವ್ಯವಹಾರಗಳು ನಡೆದಿರುವ ಬಗ್ಗೆ ದಿನಾಂಕ: 26-10-98 ರ ಮಹಾ

ಸಭೆಯಲ್ಲಿ ಸಿ.ಓ.ಡಿ, ತನಿಖೆ ನಡೆಸಲು ಸರ್ಕಾರವನ್ನು ಕೋರುವ ನಿರ್ಣಯ ತೆಗೆದುಕೊಳ್ಳಲಾಗಿದೆ. ಅದರಂತೆ ಸರ್ಕಾರವು ಈ ಕಾರ್ಖಾನೆಯಲ್ಲಿ ನಡೆದಿರಬಹುದು ಎನ್ನಲಾದ ಅವ್ಯವಹಾರಗಳನ್ನು ಕೂಲಂಕುಶವಾಗಿ ತನಿಖೆ ನಡೆಸಿ ವರದಿ ನೀಡಲು ಸಿ.ಓ.ಡಿ, ಅವರಿಗೆ ವಹಿಸುವ ವಿಚಾರವು ಸರ್ಕಾರದ ತೀವ್ರ ಪರಿಶೀಲನೆಯಲ್ಲಿ ಇದೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಪರಿಶೀಲನೆಯಲ್ಲಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಎರಡು ತಾಲ್ಲೂಕುಗಳ ರೈತರ ಬದುಕಿನ ಪ್ರಶ್ನೆ, ಬಹಳ ಮುಖ್ಯವಾದುದು.

ಅಧ್ಯಕ್ಷರು: ಇದು ಆಡಳಿತ ವ್ಯವಸ್ಥೆಯ ಭಾಷೆ. ಅಷ್ಟು ಹೇಳಿದರೆ ಸಿಓಡಿ ತನಿಖೆಗೆ ಒಪ್ಪಿಸುತ್ತಾರೆ ಎಂದರ್ಥ.

ಐ) ಹುಬ್ಬಳ್ಳಿ ನಗರದಲ್ಲಿರುವ ಮೈಸೂರು ಕಿರ್ಲೋಸ್ಕರ್ ಫ್ಯಾಕ್ಟರಿ ಕುರಿತು.

ಶ್ರೀ ಜಗದೀಶ್ ಶೆಟ್ಟರ್(ಹುಬ್ಬಳ್ಳಿ ಗ್ರಾಮಾಂತರ): ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿ ನಗರದಲ್ಲಿದ್ದಂತಹ ಮೈಸೂರ್ ಕಿರ್ಲೋಸ್ಕರ್ ಫ್ಯಾಕ್ಟರಿ ದೊಡ್ಡ ಫ್ಯಾಕ್ಟರಿ. ಇದರಲ್ಲಿಮೂರು ಸಾವಿರ ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಮೈಸೂರ್ ಕಿರ್ಲೋಸ್ಕರ್ ಕಾರ್ಖಾನೆ ಹುಬ್ಬಳ್ಳಿಯಲ್ಲಿ ಇದ್ದಂತಹುದು. ಆದರೆ ಇದನ್ನು ಕೇಂದ್ರ ಕಛೇರಿಯಾದಂತಹ ಹರಿಹರಕ್ಕೆ ಸ್ಥಳಾಂತರ ಮಾಡುತ್ತಾರೆಂಬ ಸುದ್ದಿ ಈ ನಗರದಲ್ಲಿದೆ. ಈ ರೀತಿ ಸ್ಥಳಾಂತರವಾದರೆ ಒಂದು ದೊಡ್ಡ ಫ್ಯಾಕ್ಟರಿಯಲ್ಲಿ ಕೆಲಸ ಮಾಡುವಂತಹ 3,000ಜನ ನಿರುದ್ಯೋಗಿಗಳು ಆಗುತ್ತಿದ್ದಾರೆ. ಪಾಲಂಟರಿ ರಿಟ್ರೆಂಮೆಂಟ್ ತೆಗೆದುಕೊಳ್ಳಬೇಕೆಂದು ಈಗಾಗಲೇ ಫ್ಯಾಕ್ಟರಿಯವರು ಒತ್ತಾಯ ಮಾಡುತ್ತಿದ್ದಾರೆ. ಮತ್ತು ಅಷ್ಟೇ ಅಲ್ಲ ಆ ಫ್ಯಾಕ್ಟರಿ ಮೇಲೆ ಡಿಪೆಂಡ್ ಆಗಿ ಕೆಲಸ ಮಾಡುವಂತಹ ನೂರಾರು ಸಣ್ಣ ಉದ್ದಿಮೆಗಳು ಸಹ ಬಂದ್ ಆಗಿ ಸಾವಿರಾರು ಜನ ನಿರುದ್ಯೋಗಿಗಳಾಗುವ ಪ್ರಸಂಗ ಇದೆ. ದಯವಿಟ್ಟು ಸರ್ಕಾರದವರು ಇದಕ್ಕೆ ಯಾವುದೇ ರೀತಿಯ ಒತ್ತಾಯ ತಂದು ಇದು ಸ್ಥಳಾಂತರ ಆಗದ ರೀತಿಯಲ್ಲಿ ಮತ್ತು ಹುಬ್ಬಳ್ಳಿಯಲ್ಲಿನ ಕಾರ್ಮಿಕರಿಗೆ ಅನ್ಯಾಯ ಆಗದ ರೀತಿಯಲ್ಲಿ ಸರ್ಕಾರ ಏನಾದರೂ ಕ್ರಮವನ್ನು ತೆಗೆದುಕೊಳ್ಳಬೇಕು, ಅದರ ಮೇಲೆ ಒತ್ತಾಯ ತರಬೇಕು ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ.

ಶ್ರೀ ಎಂ.ಸಿ.ನಾಣಯ್ಯ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಕೈಗಾರಿಕಾ ಮಂತ್ರಿಗಳ ಗಮನಕ್ಕೆ ಈ ವಿಚಾರವನ್ನು ತರುತ್ತೇನೆ. ಈಗ ಬರೇ ಸುದ್ದಿ ಮಾತ್ರ. ಏನೂ ವಿಚಾರ ನಡೆದಿಲ್ಲ. ಆದರೆ ಅಲ್ಲಿರತಕ್ಕ ಪರಿಸ್ಥಿತಿ ಏನು ಎಂಬ ಬಗ್ಗೆ ಮಾಹಿತಿಯನ್ನು ತರಿಸುತ್ತೇವೆ. ಅಲ್ಲಿ ಘಟಕ ಸ್ಥಳಾಂತರವಾದರೆ ಅಲ್ಲಿರತಕ್ಕಂಥ ವರ್ಕರ್ಸನ್ನು ಸ್ಥಳಾಂತರ ಮಾಡುವುದಕ್ಕೆ ಆಗುವುದಿಲ್ಲ